ಚಿಕ್ಕನಾಯಕನಹಳ್ಳಿ ಸರ್ಕಾರಿ ಕಿರಿಯ ಕಾಲೇಜು ಕಟ್ಟಡ ಮತ್ತು ರಸ್ತೆಯ ಬಗ್ಗೆ

2725ಶ್ರೀ ಜೆ.ಸಿ. ಮಾದುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚಿಕ್ಕನಾಯಕನಹಳ್ಳಿ ಸರ್ಕಾರಿ ಕಿರಿಯ ಕಾಲೇಜು ಕಟ್ಟಡವು ಅಧಿಕೃತವಾಗಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ವರ್ಗಾವಣೆ ಆಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಇದ್ದಲ್ಲಿ ವರ್ಗಾವಣೆ ಆಗುವುದಕ್ಕೆ ಮೊದಲೇ ಕಟ್ಟಡದ ಪ್ರಮುಖವಾದ ದುರಸ್ಥಿ ಕೆಲಸಗಳಿಗೆ ಒಳಗಾಗಬೇಕಾಗಿರುವುದು ನಿಜವೆ?

ಇ) ಸದರಿ ಕಟ್ಟಡದಲ್ಲಿ ಸರ್ಕಾರಿ ಜೂನಿಯರ್ ಕಾಲೇಜ್ ಹಾಗೂ ಪ್ರಥಮ ದರ್ಜೆ ಕಾಲೇಜು ನಡೆಯುತ್ತಿದ್ದು ಕಟ್ಟಡದ ಕಳಪೆ ಕೆಲಸಗಳಿಂದಾಗಿ ಮಕ್ಕಳಲ್ಲಿ ಭೀತಿ ಉಂಟು ಮಾಡಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಇದರ ದುರಸ್ಥಿಯನ್ನು ಕೈಗೊಳ್ಳುವ ಕಾರ್ಯಕ್ರಮದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? ಹಾಗಿದ್ದಲ್ಲಿ ಎಂದಿನಿಂದ?

ಉ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಸುಮಾರು 140 ಕಿ.ಮೀಟರ್ ಪ್ರಮುಖ ಹೆದ್ದಾರಿ ಸುಸ್ಥಿಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದನ್ನು ಡಾಂಬರು ಅಥವಾ ಜೆಲ್ಲಿ ಕನ್ಸಾಲಿಡೇಟೆಡ್ ಮಾಡುವ ಕೆಲಸವನ್ನು ಯಾವಾಗ ಕೈಗೊಳ್ಳುವಿರಿ?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಸದರೀ ಕಾಲೇಜು 1982ರಿಂದ ಸತತವಾಗಿ ಹಾಲೀ ಕಟ್ಟಡದಲ್ಲಿಯೇ ನಡೆಯುತ್ತಿರುವುದರಿಂದ ವರ್ಗಾವಣೆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ

ಆ) ಮೇಲಿನ 'ಅ' ಕ್ಕೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಕಾಲೇಜು ಕಟ್ಟಡವು ಸುಸ್ಥಿಯಲ್ಲಿದೆ

ಈ) 'ಇ' ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) 140 ಕಿ.ಮೀ ಉದ್ದದ ಪ್ರಮುಖ ರಸ್ತೆಯು ಸುಸ್ಥಿಯಲ್ಲಿರುತ್ತೆ 13.4 ಕಿ.ಮೀ. ರಸ್ತೆಗೆ 1991-92ರ ಸಾಲಿನಲ್ಲಿ ಡಾಂಬರ್ ಹಾಕಲು ಕ್ರಮ ಕೈಗೊಳ್ಳಲಾಗುವುದು.

ಉತ್ತರ ಕನ್ನಡದಲ್ಲಿ ನೀರಾವರಿ ಯೋಜನೆಗಳ ಸಂಖ್ಯೆ

2472 -ಶ್ರೀ ಗೋಪಿನಾಥ ಆರ್. ಸಾಂದ್ರ : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೇ?

ಅ) ಉತ್ತರ ಕಾರ್ನಾಟಕದಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ: ಅವುಗಳಿಗೆ ಮಂಜೂರು ಮಾಡಿದ ಹಣ ಎಷ್ಟು ಕಳೆದ ಐದು ವರ್ಷಗಳಲ್ಲಿ ಖರ್ಚು ಮಾಡಿದ ಹಣ ಎಷ್ಟು: ಪ್ರತಿ ಯೋಜನೆವಾರು ವಿವವರಗಳನ್ನು ಒದಗಿಸುವುದು?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್‌ರು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು

ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.